ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1278
2. ಮಾನ್ಯ ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
3. ಉತ್ತರಿಸಬೇಕಾದ ದಿನಾಂಕ : 08.03.2022
4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಬೀದರ್ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳು ಕಳೆದ 10 ವರ್ಷಗಳಲ್ಲಿ ಎಷ್ಟು ಟನ್ ಕಬ್ಬು ಅರೆದಿರುತ್ತವೆ; (ಕಾರ್ಖಾನೆವಾರು ವಿವರ ನೀಡುವುದು)	ಬೀದರ್ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಕಳೆದ 10 ವರ್ಷಗಳಲ್ಲಿ ಅರೆದಿರುವ ಕಬ್ಬಿನ ಪ್ರಮಾಣ, ಸಕ್ಕರೆ ಇಳುವರಿ, ಕಾಕಂಬಿ (ಮೊಲ್ಯಾಸಿಸ್) ಉತ್ಪಾದನೆ ಮತ್ತು ಇಳುವರಿಯ ಕಾರ್ಖಾನೆವಾರು ಮತ್ತು ವರ್ಷವಾರು ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ.
(ಆ)	ಕಬ್ಬು ಅರೆದಿದ್ದಲ್ಲಿ, ಸಕ್ಕರೆಯ ಇಳುವರಿ ಮತ್ತು ಕಾಕಂಬಿಯ (ಮೊಲಾಯಿಸಿಸ್) ಇಳುವರಿ ಎಷ್ಟು;(ಕಾರ್ಖಾನೆವಾರು ಮತ್ತು ವರ್ಷವಾರು ವಿವರ ನೀಡುವುದು)	
(ಇ)	ಕಳೆದ ಹಲವು ವರ್ಷಗಳಿಂದ ಸಕ್ಕರೆ ಇಳುವರಿ ಕಡಿಮೆ ಬರುತ್ತಿರುವ ಹಿನ್ನೆಲೆಯಲ್ಲಿ ತನಿಖಾ ತಂಡ ರಚಿಸಲಾಗಿದ್ದು, ಆ ಸಮಿತಿಯಿಂದ ತನಿಖೆ ಮಾಡಲಾಗಿದೆಯೇ;	ಬೀದರ್ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳು ಕಳೆದ ಹಲವು ವರ್ಷಗಳಿಂದ ಕಡಿಮೆ ಇಳುವರಿ ತೋರಿಸುತ್ತಿರುವ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ವಾಸ್ತವಾಂಶಗಳನ್ನು ಪರಿಶೀಲಿಸಿ, ವರದಿಯನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದ ಆದೇಶ ಸಂಖ್ಯೆ: ಡಿಎಸ್‌ಕೆ/ಎಸ್‌ಕೆ/31/2021-22, ದಿನಾಂಕ:19.02.2022ರಲ್ಲಿ ಈ ತಜ್ಞರನ್ನು ಒಳಗೊಂಡ ತನಿಖಾ ಸಮಿತಿಯನ್ನು ರಚಿಸಲಾಗಿರುತ್ತದೆ. **1.** ಶ್ರೀ ಎನ್. ಆರ್. ಯಕ್ಕೇಲಿ, ಕೃಷಿ ವಿಭಾಗದ ಮುಖ್ಯಸ್ಥರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ. **2.** ಶ್ರೀಮತಿ ತಾರಾಮಣಿ, ಜಂಟಿ ಕೃಷಿ ನಿರ್ದೇಶಕರು, ಬೀದರ್ ಜಿಲ್ಲೆ. **3.** ಡಾ||ಆರ್.ಎಲ್. ಜಾಧವ್, ವಿಜ್ಞಾನಿ (ಆಗ್ರಾನಮಿ), ಕೃಷಿ ವಿಜ್ಞಾನ ಕೇಂದ್ರ, ಬೀದರ್, ಯು.ಎ.ಎಸ್., ರಾಯಚೂರು. **4.** ಶ್ರೀ ಸಂದೀಪ್ ಬಡಿಗೇರ್, ಸಹಾಯಕ ಪ್ರಾಧ್ಯಾಪಕರು (ಸಕ್ಕರೆ ತಂತ್ರಜ್ಞಾನ), ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮೇಲ್ಕಂಡ ಸಮಿತಿಯ ಸದಸ್ಯರು ಬೀದರ್ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳಿಗೆ ಭೇಟಿ ನೀಡಿ 2011-12ನೇ ಹಂಗಾಮಿನಿಂದ 2020-21ನೇ ಹಂಗಾಮಿನವರೆಗೆ ಕಾರ್ಖಾನೆಗಳ ಇಳುವರಿಯನ್ನು ಪರಿಶೀಲಿಸಿ, ಇಳುವರಿ ಕಡಿಮೆಗೊಳ್ಳಲು ಕಾರಣಗಳು ಹಾಗೂ ಇಳುವರಿಯನ್ನು ಸುಧಾರಣೆ ಮಾಡಲು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಪರಿಶೀಲಿಸಿ, ಅಗತ್ಯ ದಾಖಲೆಗಳೊಂದಿಗೆ ವಾಸ್ತವಾಂಶವುಳ್ಳ ವರದಿಯನ್ನು ಸಲ್ಲಿಸುವಂತೆ ಸದರಿ ಆದೇಶದಲ್ಲಿ ಆದೇಶಿಸಲಾಗಿದೆ. ಸದರಿ ತಜ್ಞರ ಸಮಿತಿಯು ದಿನಾಂಕ 23.02.2022 ರಿಂದ 25.02.2022 ರವರೆಗೆ ಕಾರ್ಖಾನೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ, ಪರಿಶೀಲಿಸಿದ್ದು, ಅಂತಿಮ ವರದಿ ಸಲ್ಲಿಸುವುದು ಬಾಕಿಯಿರುತ್ತದೆ.
(ಈ)	ತನಿಖೆ ಮಾಡಿದ್ದಲ್ಲಿ, ತನಿಖೆಯಿಂದ ತಿಳಿದು ಬಂದ ಅಂಶಗಳೇನು; (ವಿವರ ನೀಡುವುದು)	

..2

(ಉ)	ತನಿಖೆಯ ಸಂದರ್ಭದಲ್ಲಿ, ಶಾಸಕರು ಮಾಹಿತಿ ನೀಡುವಂತೆ ತನಿಖಾ ತಂಡಕ್ಕೆ ತಿಳಿಸಿದ್ದರೂ ಮಾಹಿತಿ ನೀಡದಿರಲು ಕಾರಣವೇನು;ಮಾಹಿತಿ ನೀಡದಿದ್ದಲ್ಲಿ, ಅನುಮಾನಕ್ಕೆ ಎಡೆ ಮಾಡಿಕೊಡುವುದಿಲ್ಲವೇ?	ತನಿಖಾ ತಂಡವು ಮಾನ್ಯ ಕರ್ನಾಟಕ ವಿಧಾನ ಪರಿಷತ್ ಸದಸ್ಯರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ಸಕ್ಕರೆ ಕಾರ್ಖಾನೆಗಳಿಗೆ ಭೇಟಿ ನೀಡುವ ಸಮಯ ಮತ್ತು ದಿನಾಂಕವನ್ನು ಮೌಖಿಕವಾಗಿ ಮಾನ್ಯ ಕರ್ನಾಟಕ ವಿಧಾನ ಪರಿಷತ್ ಸದಸ್ಯರ ಗಮನಕ್ಕೆ ತಂದಿರುತ್ತದೆ. ತನಿಖಾ ತಂಡವು ವರದಿಯನ್ನು ಸಲ್ಲಿಸಿದ ನಂತರ ವರದಿಯ ಅಂಶಗಳನ್ನು ಮಾನ್ಯ ಕರ್ನಾಟಕ ವಿಧಾನ ಪರಿಷತ್ ಸದಸ್ಯರಿಗೆ ಒದಗಿಸಲಾಗುವುದು.

ಸಂಖ್ಯೆ: ಸಿಐ 36 ಎಸ್‌ಜಿಎಫ್ 2022

(ಶಂಕರ.ಬ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1278ಕ್ಕೆ ಅನುಬಂಧ

ವರ್ಷ	ಅರೆದಿರುವ ಕಬ್ಬಿನ ಪ್ರಮಾಣ (ಮೆ.ಟನ್‌ಗಳಲ್ಲಿ)	ಸಕ್ಕರೆ ಇಳುವರಿ (ಶೇಕಡಾವಾರು)	ಮೊಲ್ಯಾಸಿಸ್ ಉತ್ಪಾದನೆ (ಮೆ.ಟನ್‌ಗಳಲ್ಲಿ)	ಮೊಲ್ಯಾಸಿಸ್ ಇಳುವರಿ (ಶೇಕಡಾವಾರು)
ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಭಾಲ್ಕಿ				
2011-12	453806	10.48	17859	3.93
2012-13	521472	9.93	20450	3.91
2013-14	525685	9.94	21017	3.99
2014-15	565522	9.92	25342	4.47
2015-16	309007	9.35	15464	4.96
2016-17	185601	8.70	8370	4.47
2017-18	499027	9.10	22250	4.46
2018-19	458646	8.78	19010	4.14
2019-20	330228	8.00	14300	4.32
2020-21	323212	8.10	14960	4.61
ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಳ್ಳಿಖೇಡ್				
2011-12	447494	10.27	20799.430	4.65
2012-13	414670	9.93	17871.947	4.31
2013-14	418558	10.02	17391.640	4.15
2014-15	438588	9.87	19393.110	4.42
2015-16	67659	8.88	3032.502	4.48
2016-17	42129	7.02	2515.500	5.97
2017-18	20612	3.66	1420.190	6.89
2018-19	72909	6.85	3791.290	5.20
2019-20	ಕಬ್ಬು ನುರಿಸಿರುವುದಿಲ್ಲ.			
2020-21	ಕಬ್ಬು ನುರಿಸಿರುವುದಿಲ್ಲ.			
ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಳ್ಳಿಖೇಡ್				
2011-12	498373.756	10.64	22311.000	4.48
2012-13	517682.240	9.96	24613.200	4.75
2013-14	500616.712	10.01	23644.500	4.72
2014-15	519235.063	9.93	26071.200	5.02

2015–16	245023.611	9.45	12889.600	5.26
2016–17	139009.246	8.75	7188.600	5.17
2017–18	420090.570	9.40	17945.220	4.27
2018–19	333380.869	9.20	15591.200	4.68
2019–20	222057.243	8.40	9317.120	4.20
2020–21	252741.042	9.10	11700.000	4.63
ಭಾಲ್ಕೇಶ್ವರ ಶುಗರ್ಸ್ ಲಿ., ಬಾಜೋಳಗಾ				
2011–12	–	–	–	–
2012–13	–	–	–	–
2013–14	42632.145	9.15	18970.00	4.45
2014–15	368479.302	9.82	179780.00	4.88
2015–16	246082.232	9.47	138000.00	5.61
2016–17	151174.484	9.19	62000.00	4.10
2017–18	412152.488	9.05	193700.00	4.70
2018–19	292568.764	8.74	156720.00	5.36
2019–20	322047.337	9.29	147100.00	4.57
2020–21	421680.505	9.44	190190.00	4.51
ಬೀದರ್ ಕಿಸಾನ್ ಶಕ್ಕರ್ ಕಾರ್ಖಾನಾ ಲಿ., ಮೊಗದಾಳ್				
2011–12	–	–	–	–
2012–13	–	–	–	–
2013–14	–	–	–	–
2014–15	–	–	–	–
2015–16	3110.919	5.59	75.000	5.70
2016–17	3903.434	8.20	165.000	4.23
2017–18	246906.448	9.40	12207.000	4.94
2018–19	406726.251	10.10	20338.000	4.99
2019–20	322158.025	9.50	15828.000	4.91
2020–21	222019.595	8.90	10637.000	4.79
ಶ್ರೀ ಭವಾನಿ ಶುಗರ್ಸ್ ಲಿ., ಬರೂರು,				
2011–12	58837.107	10.32	2827	4.80
2012–13	42130.865	9.55	2066	4.89
2013–14	50289.136	9.67	2494	4.95
2014–15	59200.152	9.48	2882	4.87

2015–16	25413.656	9.17	1202	4.73
2016–17	25860.445	9.18	1305	5.30
2017–18	77734.308	9.41	3624	4.66
2018–19	47185.653	9.35	2352	4.98
2019–20	ಕಬ್ಬು ನುರಿಸಿರುವುದಿಲ್ಲ.			
2020–21	ಕಬ್ಬು ನುರಿಸಿರುವುದಿಲ್ಲ.			

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು